## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಶಿಡ್ಲಘಟ್ಟ

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿನಾಂಕಃ 13.12.2024

**ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು ಆರೋಪಿ ಪರ ಶ್ರೀ ಸಿ ಕೆ ವಿ ವಕೀಲರಿಂದಃ**

ನಾನು ವ್ಯವಸಾಯ ಮಾಡುತ್ತೇನೆ. ನನ್ನ ಹೆಸರಿನಲ್ಲಿ, ನನ್ನ ಹೆಂಡತಿ ಹೆಸರಿನಲ್ಲಿ ಒಟ್ಟು **04** ಎಕರೆ ಜಮೀನು ಇರುತ್ತದೆ. ನನ್ನ ಹೆಂಡತಿ ಹೆಸರು ಸುಮ. ನಾನು ರೇಷ್ಮೆ ಬೆಳೆಯನ್ನು ಬೆಳೆಯುತ್ತೇನೆ ಹಾಗೂ ಮನೆಯಲ್ಲಿ ಹಸು ಸಹ ಇರುತ್ತದೆ. ರೇಷ್ಮೆ ಬೆಳೆ ಮೂರು ತಿಂಗಳಿಗೊಮ್ಮೆ ಬರುವ ಬೆಳೆ ಎಂದರೆ ಸರಿ. ನಾವು ಮೂವರು ಅಣ್ಣ-ತಮ್ಮಂದಿರು ಹಾಗೂ ಬೇರೆ ಬೇರೆ ವಾಸ ಮಾಡುತ್ತಿದ್ದೇವೆ. ನನಗೆ ಇಬ್ಬರು ಮಕ್ಕಳು. ಇಬ್ಬರು ಮಕ್ಕಳೂ ಸಹ ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ನನಗೆ ರೇಷ್ಮೆ ಬೆಳೆಯಿಂದ, ಹಸು, ಕುರಿ, ಮೇಕೆಯಿಂದ ವಾರ್ಷಿಕವಾಗಿ **15** ಲಕ್ಷ ಆದಾಯ ಇರುತ್ತದೆ. ನಾನು ಯಾವುದೇ ತೆರಿಗೆ ಪಾವತಿ ಮಾಡುವುದಿಲ್ಲ. ಹಸು ಸಾಕಾಣಿಕೆಯಿಂದ ಬರುವ ಹಾಲಿನ ಆದಾಯ ನನ್ನ ಬ್ಯಾಂಕ್ ಖಾತೆಗೆ ಹೋಗುತ್ತದೆಂದರೆ ಸರಿ. ನನ್ನ ಬ್ಯಾಂಕ್ ಖಾತೆಗೆ ಸಂಬಂಪಟ್ಟ ದಾಖಲೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನನ್ನ ಇಬ್ಬರೂ ಮಕ್ಕಳು ನವೋದಯ ಶಾಲೆಯಲ್ಲಿ ವ್ಯಾಸಾಂಗ ಮಾಡುತ್ತಿದ್ದಾರೆ. ನನ್ನ ಮಕ್ಕಳಿಗೆ ಯಾವುದೇ ಆದಾಯ ಪ್ರಮಾಣ ಪತ್ರ ವನ್ನು ಮಾಡಿಸಿರುವುದಿಲ್ಲ.

**2.** ನನಗೆ ಸಂಬಂದ ಪಟ್ಟಿದಂತೆ ಒಂದು ಬ್ಯಾಂಕ್ ಖಾತೆ ಭಕ್ತರಹಳ್ಳಿಯ ಕೆನರಾ ಬ್ಯಾಂಕಿನಲ್ಲಿರುತ್ತದೆ. ಜಮೀನಿಗೆ ಸಂಬಂದಪಟ್ಟ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನನ್ನ ಕುಟುಂಬಕ್ಕೆ ಸಂಬಂದಪಟ್ಟಂತೆ ಬಿ ಪಿ ಎಲ್ ಪಡಿತರ ಚೀಟಿ ಇರುತ್ತದೆ. ಸದರಿ ಬಿ ಪಿ ಎಲ್ ಕಾರ್ಡನ್ನು ವಾರ್ಷಿಕವಾಗಿ ಒಂದು ಲಕ್ಷ ಆದಾಯ ಇರುವವರಿಗೆ ಮಾತ್ರ ನೀಡಲಾಗುತ್ತದೆಂದರೆ ಸರಿ. ನಾನು ವ್ಯವಸಾಯವನ್ನು ಹೊರತು ಪಡಿಸಿ ಬೇರೆ ಯಾವುದೇ ಕೆಲಸ ಮಾಡುವುದಿಲ್ಲ.

**3.** ನನಗೆ ರಾಜಣ್ಣ ಎನ್ನುವವರ ಪರಿಚಯ ಇರುತ್ತದೆ ಅವರು ಬೆಂಗಳೂರಿನ ಬಾಣಸವಾಡಿಯಲ್ಲಿರುತ್ತದೆ. ಸದರಿ ರಾಜಣ್ಣ ನವರು ರಿಯಲ್ ಎಸ್ಟೇಟ್ ಬಿಸಿನೆಸ್ ಮಾಡುತ್ತಿದ್ದು ನಮ್ಮ

ಊರಿಗೆ ಆಗಾಗ ಬಂದು ಹೋಗುತ್ತಿದ್ದು ಆಗ ಪರಿಚಯ ಇರುತ್ತಾರೆ. ಸದರಿ ರಾಜಣ್ಣ ಬ್ರೋಕರ್ ಕೆಲಸ ಮಾಡುತ್ತಿದ್ದು ಬೇರೆಯವರಿಗೆ ಜಮೀನು ಕೊಡಿಸಿರುತ್ತಾರೆ ಹಾಗೂ ನಮ್ಮ ಜಮೀನಿನ ಪಕ್ಕದ ಜಮೀನನ್ನು ಬೇರೆಯವರಿಗೆ ಮಾರಾಟ ಮಾಡಿಸಿಕೊಟ್ಟಿರುತ್ತಾರೆ. ಸದರಿ ಬ್ರೋಕರ್ ಕೆಲಸವನ್ನು **2019** ರಿಂದ ಮಾಡುತ್ತಿದ್ದಾರೆ. ನನಗೆ ರಾಜಣ್ಣ **2020** ರಿಂದ ಪರಿಚಯ ಇರುತ್ತಾರೆ.

**4.** ಆರೋಪಿ ಮಹೀಂದ್ರಾ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದಾರೆಂದು ನನ್ನ ದೂರಿನಲ್ಲಿ ಹೇಳಿದ್ದು ಅದಕ್ಕೆ ಸಂಬಂದಪಟ್ಟ ದಾಖಲೆಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನನ್ನ ಮತ್ತು ರಾಜಣ್ಣ ರವರ ಮಧ್ಯೆ ಯಾವುದೇ ಹಣಕಾಸಿನ ವ್ಯವಹಾರ ಇರುವುದಿಲ್ಲ. ಆರೋಪಿಗೆ ರಾಜಣ್ಣ ರವರು ಮಾವನಾಗಬೇಕು. ಸಾಕ್ಷಿ ರಾಜಣ್ಣನವರ ಮಗಳನ್ನು ಆರೋಪಿ ವಿವಾಹ ಆಗಿರುತ್ತಾರೆ. ನಾನು ಕೊನೆಯ ಬಾರಿ ರಾಜಣ್ಣ ನವರನ್ನು **2020** ರಲ್ಲೇ ಬೇಟಿಯಾಗಿರುತ್ತೇನೆ. **2020** ರ ನಂತರ ನಾನು ಮತ್ತು ರಾಜಣ್ಣ ಬೇಟಿಯಾಗಿರುವುದಿಲ್ಲ. ಆರೋಪಿ ನನಗೆ ನೇರವಾಗಿ ಪರಿಚಯ ಇರುವುದಿಲ್ಲ ಎಂದರೆ ಸಾಕ್ಷಿ ರಾಜಣ್ಣ ನವರ ಮೂಲಕ ಪರಿಚಯ ಇರುತ್ತಾರೆಂದು ಹೇಳುತ್ತಾರೆ. ಆರೋಪಿ ಸಹ ರಾಜಣ್ಣನವರೊಟ್ಟಿಗೆ ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತಿದ್ದು ಆಗಾಗ ರಾಜಣ್ಣನವರೊಟ್ಟಿಗೆ ನಮ್ಮ ಊರಿಗೆ ಬರುತ್ತಿದ್ದುದ್ದರಿಂದ ಪರಿಚಯ ಆಗಿರುತ್ತಾರೆ. ನಾನು ಆರೋಪಿಯನ್ನು ಕೊನೆಯ ಬಾರಿ **2021** ರಲ್ಲಿ ಬೇಟಿಯಾಗಿರುತ್ತೇನೆ ಯಾವ ದಿನಾಂಕ ಮತ್ತು ತಿಂಗಳು ಎಂದು ನೆನಪಿಲ್ಲ. ಆರೋಪಿಯನ್ನು ಕೊನೆಯ ಬಾರಿ ನಮ್ಮ ಊರಿನಲ್ಲಿ ನಮ್ಮ ಮನೆಯಲ್ಲಿ ಬೇಟಿಯಾಗಿರುತ್ತೇನೆ. **2021** ರಲ್ಲಿ ನಾನು ಆರೋಪಿ ಸುಮಾರು **6-7** ಬಾರಿ ಬೇಟಿ ಯಾಗಿರುತ್ತೇವೆ. ಎಷ್ಟು ದಿನಗಳ ಅಂತರದಲ್ಲಿ ಬೇಟಿಯಾಗಿರುತ್ತೇವೆಂದು ನಿಖರವಾಗಿ ಹೇಳಲಾಗುವುದಿಲ್ಲ.

**5.** ಹಣದ ವಿಚಾರವನ್ನು ಆರೋಪಿ ಒಬ್ಬರೇ ನನ್ನನ್ನು ಬೇಟಿಯಾಗಿ ಮಾತನಾಡಿರುತ್ತಾರೆ. ನಾನು ಆರೋಪಿಗೆ ಒಟ್ಟು **08** ಲಕ್ಷ ಹಣವನ್ನು ನೀಡಿರುತ್ತೇನೆ. ಆರೋಪಿಗೆ ನಾನು ತಲಾ **02** ಲಕ್ಷದಂತೆ **08** ಲಕ್ಷ ಹಣವನ್ನು ನೀಡಿರುತ್ತೇನೆ. ದಿನಾಂಕ ನೆನಪಿರುವುದಿಲ್ಲ. ಒಂದೂವರೆ ತಿಂಗಳ ಅಂತರದಲ್ಲಿ **02** ಬಾರಿ ತಲಾ **02** ಲಕ್ಷ ಹಣವನ್ನು ತೆಗೆದುಕೊಂಡು ಹೋಗಿರುತ್ತಾರೆ ಮತ್ತೆ ಯಾವಾಗ ಹಣವನ್ನು ತೆಗೆದುಕೊಂಡಿರುತ್ತಾರೆಂದು ಹೇಳಲಾಗುವುದಿಲ್ಲ. ಡಿಸೆಂಬರ್**-2021** ರಲ್ಲಿ ಆರೋಪಿ ನನಗೆ ಚೆಕ್ಕನ್ನು ನೀಡಿರುತ್ತಾರೆ. ದಿನಾಂಕ ಹೇಳಲಾಗುವುದಿಲ್ಲ. ಹಣದ ವ್ಯವಹಾರ ಎಷ್ಟು ತಿಂಗಳ

ಅಂತರದಲ್ಲಿ ನಡದಿರುತ್ತದೆಂದು ನನಗೆ ಹೇಳಲಾಗುವುದಿಲ್ಲ. ನನ್ನ ಮತ್ತು ಆರೋಪಿಯ ಮಧ್ಯೆ ಯಾವುದೇ ಹಣದ ವ್ಯವಹಾರ ಆಗದೇ ಇರುವುದರಿಂದ ನನಗೆ ಸದರಿ ವಿಚಾರವನ್ನು ನಿಖರವಾಗಿ ಹೇಳಲಾಗುತ್ತಿಲ್ಲ ಎಂದರೆ ಸರಿಯಲ್ಲ. ರಾಜಣ್ಣನವರನ್ನು ಕರೆಸಿ ವಿಚಾರಣೆ ನಡೆಸಲು ತೊಂದರೆ ಇರುತ್ತದೆ.

**(**ಮುಂದುವರಿದ ಪಾಟೀ ಸವಾಲಿಗಾಗಿ ಆರೋಪಿ ಪರ ವಕೀಲರು ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು**).**

**(ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)**

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾದಂ., ಶಿಡ್ಲಘಟ್ಟ.